ಎಂ ವಿ ಸಿ ಸಂಖ್ಯೆ 686/2023

ಪಿ ಡಬ್ಲ್ಯೂ-1

**(ದಿನಾಂಕ 24.10.2025 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣೀಕರಿಸಲಾಯಿತು.)**

**ಪಾಟೀ ಸವಾಲು ಎದುರುದಾರರ ಪರ ಶ್ರೀ ಎ ಎಂ ವಿ ವಕೀಲರಿಂದಃ-**

ಅಪಘಾತ ಆದ ದಿನ ನನ್ನ ಗಂಡ ಬೈಕ್ ಚಲಾಯಿಸುತ್ತಿದ್ದರು ಎಂದರೆ ಸರಿ. ಬೈಕ್ ನನ್ನ ಗಂಡನಿಗೆ ಸಂಬಂಧಪಟ್ಟಿರುತ್ತದೆ. ನನ್ನ ಗಂಡ ಕೆ ಎ 17 ಎಕ್ಸ 0408 ಬೈಕ್ ಓಡಿಸುತ್ತಿದ್ದು ಅದರ ವಿಮಾದಾರರನ್ನು ಪಕ್ಷಗಾರರನ್ನಾಗಿ ಮಾಡಲು ತೊಂದರೆ ಇಲ್ಲಾ ಎಂದರೆ ಸರಿ. ಅಪಘಾತ ನನ್ನ ಗಂಡ ಓಡಿಸುತ್ತಿದ್ದ ಕೆ ಎ 17 ಎಕ್ಸ 0408 ಬೈಕ್‌ಗೆ ವಿಮೆ ಇರಲಿಲ್ಲ ನನ್ನ ಗಂಡನಿಗೆ ಬೈಕ್ ಡಿ ಎಲ್ ಕೂಡ ಇರಲಿಲ್ಲ ಎಂದರೆ ಸರಿಯಲ್ಲ. 07.08.2022 ರಂದು ಅಪಘಾತ ಆಗಿದೆ ಎಂದರೆ ಸರಿ. ಚಿಗಟೇರಿ ಪೋಲೀಸರು ದಿನಾಂಕ 13.09.2022 ರಂದು ತನಿಖೆ ಮುಗಿಸಿ ದೋಷಾರೋಪಣ ಪಟ್ಟಿ ಸಲ್ಲಿಸಿರುತ್ತಾರೆ ಎಂದರೆ ಸರಿ. ಒಂದು ತಿಂಗಳಿನಲ್ಲಿಯೇ ದೋಷಾರೋಪಣ ಪಟ್ಟಿ ಸಲ್ಲಿಸಿರುತ್ತಾರೆ ಎಂದರೆ ಸರಿ. ಕೆಂಚಮ್ಮ ರಕ್ಷಿತಾ ಅವರ ಆಧಾರ ಕಾರ್ಡ ಹಾಜರುಪಡಿಸುತ್ತೇನೆ. ನನ್ನ ಗಂಡ 7ನೇ ತರಗತಿ ವಿದ್ಯಾಭ್ಯಾಸ ಮಾಡಿರುತ್ತಾರೆ. ನನ್ನ ಗಂಡನ ಆಧಾರ ಕಾರ್ಡ ಪಾನ್ ಕಾರ್ಡ ರೇಶನ್ ಕಾರ್ಡ ಹಾಜರುಪಡಿಸಬಲ್ಲೆ. ರಕ್ಷಿತಾಗೆ ಮದುವೆ ಆಗಿದೆ. ಅವರು ಗಂಡನ ಮನೆಯಲ್ಲಿ ವಾಸವಾಗಿರುತ್ತಾರೆ. ನನ್ನ ಮಗಳು ಆಕೆಯ ಗಂಡನ ಆದಾಯದ ಮೇಲೆ ಅವಲಂಬಿತರಾಗಿರುತ್ತಾರೆ ಎಂದರೆ ಸರಿ. ನನ್ನ ಗಂಡನ ತಾಯಿ 4ನೇ ಅರ್ಜಿದಾರಳು ಮೂಗಮ್ಮ. ಮೂಗಮ್ಮನಿಗೆ ಒಬ್ಬನೇ ಮಗ. ತಹಶೀಲ್ದಾರ ಕಚೇರಿಯಿಂದ ಮೂಗಮ್ಮನ ವಂಶವೃಕ್ಷ ಹಾಜರುಪಡಿಸಲು ತೊಂದರೆ ಇಲ್ಲಾ ಎಂದರೆ ಸರಿ. ಪೋಲೀಸರು ನಿಗದಿತ ಸಮಯದಲ್ಲಿ ದೋಷರೋಪಣ ಪಟ್ಟಿ ಸಲ್ಲಿಸಿದ್ದರು ಸಹ ನಾನು ನಿಗದಿತ ಅವಧಿಯ ಒಳಗೆ ಅರ್ಜಿ ಸಲ್ಲಿಸಿರುವುದಿಲ್ಲಾ ಎಂದರೆ ನನಗೆ ಆರೋಗ್ಯ ಸರಿ ಇರಲಿಲ್ಲ. ಆರೋಗ್ಯ ಸರಿ ಇಲ್ಲಾ ಅಂತಾ ತೋರಿಸಲು ದಾಖಲೆ ಹಾಜರುಪಡಿಸಿರುವುದಿಲ್ಲಾ. ನನ್ನ ಗಂಡನ ಆದಾಯ ತೋರಿಸಲು

ಎಂ ವಿ ಸಿ ಸಂಖ್ಯೆ 686/2023
ಪಿ ಡಬ್ಲ್ಯೂ-1

ದಾಖಲೆಯನ್ನು ಹಾಜರುಪಡಿಸಿರುವುದಿಲ್ಲಾ. ನನ್ನ ಗಂಡನ ತಪ್ಪಿನಿಂದ ಅಪಘಾತ ಆಗಿದೆ ಎಂದರೆ ಸರಿಯಲ್ಲ. ನನ್ನ ಗಂಡನಿಗೆ ಡಿ ಎಲ್ ಇಲ್ಲದಿದ್ದ ಕಾರಣ ಬೈಕ್ ಗೆ ವಿಮೇ ಇಲ್ಲದಿದ್ದ ಕಾರಣ ಪೋಲೀಸರೊಂದಿಗೆ ಶಾಮೀಲಾಗಿ ಸುಳ್ಳು ಕೇಸನ್ನು ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ಅಪಘಾತ ನನ್ನ ಗಂಡನ ತಪ್ಪಿನಿಂದ ಆಗಿದೆ ಅವರಿಗೆ ಡಿಎಲ್ ಕೂಡ ಇರಲಿಲ್ಲ ಎಂದರೆ ಸರಿಯಲ್ಲ. ನನ್ನ ಗಂಡನ ಡಿ ಎಲ್ ಹಾಜರುಪಡಿಸಲು ತೊಂದರೆ ಇಲ್ಲಾ ಎಂದರೆ ಅದು ಕಳೆದಿರುತ್ತದೆ. ನನ್ನ ಗಂಡ ಓಡಿಸುತ್ತಿದ್ದ ಕೆ ಎ 17 ಎಕ್ಸ 0408 ಬೈಕ್ ಮಂಜುನಾಥ ಡಿ ರವರಿಗೆ ಸೇರಿದ್ದು ಎಂದರೆ ಸರಿಯಲ್ಲ. ಪೋಲೀಸ ಠಾಣೆ ಯಲ್ಲಿ ನನ್ನ ಬೈಕನ್ನು ನನ್ನ ಚಿಕ್ಕಮ್ಮನ ಮಗ ಬಿಡಿಸಿಕೊಂಡು ಬಂದಿರುತ್ತಾನೆ. ನನ್ನ ಗಂಡ ಓಡಿಸುತ್ತಿದ್ದ ಕೆ ಎ 17 ಎಕ್ಸ 0408 ಬೈಕ್ ಮಾಲೀಕ ಮಂಜುನಾಥ ಡಿ ಅಂತಾ ಪೋಲೀಸರು ತನಿಖೆ ಮಾಡಿ ಅವರ ವಿರುದ್ದ ಕೂಡ ದೋಷಾರೋಪಣ ಪಟ್ಟಿ ಸಲ್ಲಿಸಿರುತ್ತಾರೆ ಎಂದರೆ ಸರಿಯಲ್ಲ. ಪೋಲೀಸರು ಸಲ್ಲಿಸಿರುವ ದೋಷಾರೋಪಣ ಪಟ್ಟಿ ಸರಿಯಾಗಿ ಇದೆ ಎಂದರೆ ನನಗೆ ಗೊತ್ತಿಲ್ಲಾ. ನಾನಾಗಲಿ ಉಳಿದ ಅರ್ಜಿದಾರರಾಗಲಿ ಮೃತನ ಆದಾಯದ ಮೇಲೆ ಅವಲಂಬಿತರಾಗಿರುವುದಿಲ್ಲಾ ಎಂದರೆ ಸರಿಯಲ್ಲ. ನನ್ನ ಗಂಡನಿಗೆ ತಿಂಗಳಿಗೆ 50 ಸಾವಿರ ರೂ ಆದಾಯ ಇರಲಿಲ್ಲ ಎಂದರೆ ಸರಿಯಲ್ಲ. ಅಪಘಾತ ನನ್ನ ಗಂಡನ ತಪ್ಪಿನಿಂದ ಆಗಿದೆ ಅವರಿಗೆ ಡಿಎಲ್ ಕೂಡ ಇರಲಿಲ್ಲ ಹೀಗಾಗಿ 3 ನೇ ಎದುರುದಾರರು ಪರಿಹಾರ ಕೊಡಲು ಬಾಧ್ಯಸ್ಥರಲ್ಲಾ ಎಂದರೆ ಸರಿಯಲ್ಲ. ನನ್ನ ಗಂಡನಿಗೆ ಮೃತ ಹೊಂದಿದಾಗ 50 ವರ್ಷ ಆಗಿತ್ತು ಎಂದರೆ 40 ವರ್ಷ ಆಗಿತ್ತು. ಹೆಚ್ಚಿನ ಪರಿಹಾರ ಬರಬೇಕೆಂದು ಗಂಡನ ವಯಸ್ಸನ್ನು ಕಡಿಮೆ ತೋರಿಸಿರುತ್ತೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲಾಃ-

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನದಂತೆ ಗಣಕೀಕೃತ ಗೊಳಿಸಲಾಯಿತು.)

ಓ ಹೇ ಕೇ ಸರಿ ಇದೆ.

ಹಿರಿಯ ಸಿವಿಲ್ ಮತ್ತು ಜೆ ಎಂ ಎಫ್ ಸಿ
ನ್ಯಾಯಾಧೀಶರು, ಹರಪನಹಳ್ಳಿ.